\-     -                                                     ಸಿ.ಸಿ. ನಂ. 569 /2023

**ಪಿ. ಡಬ್ಲ್ಯೂ: 1**

**( ಇಂದು ದಿಃ 05/02/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.)**

**<u>ಪಾಟೀ ಸವಾಲು : ಆರೋಪಿ ಪರ ಶ್ರೀ ಎಮ್ ಜೆ ಎನ್ ವಕೀಲರಿಂದ,</u>**

ಆರೋಪಿಯ ನಮ್ಮ ಸಂಸ್ಥೆಯಲ್ಲಿ ಸುಮಾರು 8 –10 ವರ್ಷಗಳಿಂದ ವ್ಯವಹಾರ ಮಾಡಿರುತ್ತಾರೆ. ಈ ಹಿಂದೆ ಪಡೆದ ಸಾಲವನ್ನು ಆರೋಪಿಯು ಚುಕ್ತಾ ಮಾಡಿದ್ದಾರೆ. ಅರೋಪಿಗೆ ರೂ. 10,00,000 ಒವರ ಡ್ರಾಪ್ಟ ಸಾಲವನ್ನು ನೀಡಿರುತ್ತೇವೆ. ಆರೋಪಿಯು ಯಾವುದೇ ಕಂತನ್ನು ತುಂಬಿಲ್ಲ. ಭದ್ರತೆಗಾಗಿ ಜಮೀನನ್ನು ಪಡೆದಿರುತ್ತೇವೆ. ಭದ್ರತೆಗಾಗಿ ಚೆಕ್ಕನ್ನು ಪಡೆದಿಲ್ಲ. ಸಾಲಕ್ಕೆ ಸಂಬಂಧಿಸಿದ ಸಾಲದ ಖಾತಾ ಉತ್ತರೆ ಇದೆ. ಸದರಿ ಖಾತೆಯಲ್ಲಿ ಪ್ರತಿ ತಿಂಗಳ ಬಡ್ಡಿ ಮತ್ತು ಅಸಲನ್ನು ನಮೂದಿಸಲಾಗಿದೆ. ನಿಪಿ–10 ನಾವು ಬೆರಳಚ್ಚು ಮಾಡಿ ಖಾತಾ ಉತ್ತರೆಯನ್ನು ಪ್ರಿಂಟ್ ತೆಗೆದಿರುತ್ತೇವೆ. ನಾವು ಹೇಳುವಂತೆ ಆರೋಪಿಯು ನಮ್ಮ ಸಂಸ್ಥೆಯಿಂದ ಸಾಲ ಪಡೆದಿದ್ದೇ ಇಲ್ಲ ಎಂದರೆ ಸರಿಯಲ್ಲ. ಆರೋಪಿತನು ಹಿಂದಿನ ಸಾಲದ ಭದ್ರತೆಗಾಗಿ ನೀಡಿದ ಚೆಕ್ಕನ್ನು ದುರುಪಯೋಗಪಡಿಸಿ ಆತನ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ವಕೀಲರ ನೊಟೀಸು ಆರೋಪಿಗೆ ತಲುಪಿಲ್ಲ ಎಂದರೆ ಸರಿಯಲ್ಲ. ನಿಪಿ–10 ನಾವು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಚೆಕ್ಕಿನ ಮೇಲೆ ಇರುವ ಬರವಣಿಗೆ ನಮ್ಮದೇ ಇದೆ ಎಂದರೆ ಸರಿಯಲ್ಲ. ಚೆಕ್ಕಿನ ಮೇಲೆ ಇರುವ ಬರವಣಿಗೆ ಹಾಗೂ ಸಹಿಯ ಶಾಹಿಯಲ್ಲಿ ವ್ಯತ್ಯಾಸ ಇರಬಹುದು. ಆರೋಪಿಯು ನಿಪಿ–1 ಚೆಕ್ಕಿನ ಮೊತ್ತ ಕೊಡಲು ಬಾಧ್ಯಸ್ಥನಲ್ಲ ಎಂದರೆ ಸರಿಯಲ್ಲ. ಆರೋಪಿಯು ಸದರಿ ಸಾಲವನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ**

**ಸಹಿ ಇದೆ**

**ಪ್ರ.ದ.ನ್ಯಾ.ದಂ., ಭಟ್ಕಳ**